# ಚಿಮೂ ಜೊತೆ ಅಮೃತ ಕ್ಷಣ

**ಕನ್ನಡದ ಹಿರಿಯ ಸಂಶೋಧಕ, ನಾಡಿನ ಹೆಸರಾಂತ ಸಾಹಿತಿ ಡಾ. ಚಿದಾನಂದ ಮೂರ್ತಿ ಅವರೊಂದಿಗೆ ಒಡನಾಡಿದ ನೆನಪು ಎಂದಿಗೂ ಮರೆಯಲಾಗದ ಸವಿನೆನಪು.**

■ ರಘುನಾಥರಾವ್ ತಾಪ್ಸೆ



ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಸಿಗಲೆಂದು ಹೋರಾಟ ಮಾಡಿದವರಲ್ಲಿ ಹಿರಿಯ ಸಂಶೋಧಕರಾದ ಡಾ.ಎಂ.ಚಿದಾನಂದ ಮೂರ್ತಿ ಪ್ರಮುಖರು. ಡಾ.ಚಿ.ಮೂ.ಇನ್ನಿಲ್ಲ ಎಂಬ ಸುದ್ದಿ ಕೇಳಿದ್ದು ಶಂಕರನಾರಾಯಣ (ಕಂದಾಪುರ) ದಲ್ಲಿ. ಇದು ನನ್ನ ಮನಸ್ಸಿಗೆ ಆದ ಆಘಾತಕಾರಿ ಸುದ್ದಿಗಳಲ್ಲೊಂದು. ಮೂರು ದಶಕಗಳ ಹಿಂದೆ ಹಂಪೆಯಲ್ಲಿ ಅವರ ಪರಿಚಯವಾಗಿ ನಾನೊಬ್ಬ ಹವ್ಯಾಸಿ ಬರಹಗಾರನಾಗಲು ನನ್ನ ಆತ್ಮೀಯರಾದ ಡಾ.ಚಿ.ಮೂ ಅವರೇ ಕಾರಣ.

ನಾನು 1988ರ ಸೆಪ್ಟೆಂಬರ್‌ನಲ್ಲಿ ಹಂಪೆಯ ಬ್ಯಾಂಕಿನ ಸೇವೆಯಲ್ಲಿದ್ದಾಗ ತಮ್ಮ ಸಂಶೋಧನಾ ವಿದ್ಯಾರ್ಥಿಗಳೊಂದಿಗೆ ಹಂಪೆಗೆ ಬಂದು 'ಈ ಕ್ಷೇತ್ರ ದಕ್ಷಿಣದ ಕಾಶಿ' ಎಂದು ತಿಳಿಸುತ್ತಾ ಹಂಪೆಯ ಶ್ರೀ ವಿರೂಪಾಕ್ಷೇಶ್ವರನ ನಾಲ್ಕು ದಿಕ್ಕುಗಳನ್ನು ಗುರುತಿಸುವುದು, ಶಿಲಾಶಾಸನಗಳ ಅಧ್ಯಯನ ಮಾಡುವುದು.. ಹಾಗೆಯೇ, ಆ ಲಿಂಗಗಳ ದರ್ಶನ, ಸ್ಥಳೀಯರೊಂದಿಗೆ ಬೆರೆತು ಅಧ್ಯಯನ ಮಾಡಿದ್ದು ಇನ್ನೂ ಮನದಾಳದಲ್ಲಿ ಹಚ್ಚಹಸುರಾಗಿದೆ. ಇತಿಹಾಸ ದಾಖಲಿಸಲು ಒಂದು ದಿನದ ಪ್ರವಾಸಕ್ಕೆಂದು ಹೊರಟಾಗ, ಅವರು ತಮ್ಮ ಸಂಗಡ ಹವ್ಯಾಸಿ ಛಾಯಾಗ್ರಾಹಕನಾಗಿದ್ದ ನನ್ನನ್ನು ಕರೆದುಕೊಂಡು ಹೋಗಿದ್ದರು. ಅಂದು ಬೆಳಿಗ್ಗೆ ಹಂಪೆಯ ವಿರೂಪಾಕ್ಷೇಶ್ವರನ ದರ್ಶನದ ನಂತರ ಹೊರಟ ಪ್ರಯಾಣ ಮೊದಲು ಪೂರ್ವ ದಿಕ್ಕಿನ ಬುಕ್ಕಸಾಗರದಲ್ಲಿನ ಕಿನ್ನುರೇಶ್ವರ, ನಂತರ ಶಿವಪುರದ ಸೋಮನಾಥೇಶ್ವರ, ಮಲ್ಲಾಪುರದ ಶ್ರೀವಾಣಿ ವೀರಭದ್ರೇಶ್ವರ ಹಾಗೂ ಅಂತಿಮವಾಗಿ ಹೊಸಪೇಟೆಯ ಹತ್ತಿರದ ದಕ್ಷಿಣದ ಜಂಬುನಾಥೇಶ್ವರ ದೇವಾಲಯಗಳಿಗೆ ಭೇಟಿ ನೀಡಿ ಮರಳಿದ್ದು ಇನ್ನೂ ನೆನಪಿದೆ.

ಸಂಶೋಧನಾ ಕಾರ್ಯದಲ್ಲಿ ಚಿ.ಮೂ ಅವರು ನಿರತರಾದಾಗ ಅವರ ಓಡಾಟ ಯುವ ವಿದ್ಯಾರ್ಥಿಗಳಿಗಿಂತಲೂ ಮೀರಿ ಕ್ರೀಯಾಶೀಲರಾಗಿ ಇರುವುದನ್ನು ನಾನು ಕಂಡಿದ್ದೇನೆ. ಆಗ ಅವರಿಗೆ ಐವತ್ತೇಳರ ನಿವೃತ್ತಿಗೆ ಹತ್ತಿರದ ವಯಸ್ಸಿದ್ದರೂ, ಬೆಟ್ಟಗುಡ್ಡಗಳಲ್ಲಿನ ಕಲ್ಲು ಬಂಡೆಗಳ ಹತ್ತಿ ಇಳಿಯುವ, ಕಗ್ಗತ್ತಲಿನ ಗುಹೆಗಳಲ್ಲಿ ಧೈರ್ಯದಿಂದ ಮುಂದೆ ಮುಂದೆ ಸಾಗುತ್ತಾ ಅತ್ಯಲ್ಪ ಬೆಳಕಿನಲ್ಲಿ ಶಿಲಾಶಾಸನಗಳನ್ನು ಗುರುತಿಸಿ ಅವುಗಳ ಛಾಯಾಚಿತ್ರಗಳನ್ನು ತೆಗೆಯುವಂತೆ ನನಗೆ ಸೂಚಿಸುತ್ತಲೇ... ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತಾ ಸಾಗುತ್ತಿದ್ದ ಪರಿ ಶ್ಲಾಘನೀಯ. ಲಿಪಿಯಿಲ್ಲದ (ಅಕ್ಷರದ ರೂಪದಲ್ಲಿರದ) ಕಾಲದಲ್ಲಿ ಚಿತ್ರಲಿಪಿಗಳ ಮೂಲಕ ಭಾವನೆಗಳನ್ನು ವ್ಯಕ್ತಪಡಿಸಿದ್ದನ್ನು (ಕಲ್ಲು ಬಂಡೆಗಳ ಮೇಲೆ ಇರುವ ಕೆತ್ತನೆಗಳು) ಒಂದೊಂದಾಗಿ ಕತೆಯ ರೂಪದಲ್ಲಿ ಅವರೊಂದಿಗೆ ಬಂದ ವಿದ್ಯಾರ್ಥಿಗಳಿಗೆ ಹೇಳುತ್ತಿದ್ದರು.

ಸದಾ ಲವಲವಿಕೆಯಿಂದ ಇರುತ್ತಿದ್ದ ಚಿ.ಮೂ ಅವರು ಕನ್ನಡ ಶಕ್ತಿ ಕೇಂದ್ರ ಸ್ಥಾಪಿಸುವ ಮೂಲಕ ಕನ್ನಡದ ಚಳುವಳಿಗೆ ಶಕ್ತಿ ತುಂಬಿದ್ದರು. ಅವರ ಕಾರ್ಯ ಚಟುವಟಿಕೆಗಳಿಗೆ ಮೆಚ್ಚಿ, ನಾನು ಬ್ಯಾಂಕಿಗೆ ನಾಲ್ಕು ದಿನ ರಜೆ ಹಾಕಿ ಕನ್ನಡ ಶಕ್ತಿ ಕೇಂದ್ರದ ಪ್ರಥಮ ಸಮ್ಮೇಳನ ಹಂಪೆಯಲ್ಲಿ ಯಶಸ್ವಿಯಾಗಲು ಸಹಕರಿಸಿದ್ದು ನನ್ನ ನೆನಪಿನಂಗಳದಲ್ಲಿದೆ.

ನೋಡಲು ಮೂರ್ತಿ ಚಿಕ್ಕದಾದರೂ ಹಿರಿಯ ಸಂಶೋಧಕ ಡಾ.ಎಂ.ಚಿದಾನಂದ ಮೂರ್ತಿ ಅವರು ಕನ್ನಡಕ್ಕೆ ನೀಡಿದ ಕೊಡುಗೆ ಅನನ್ಯ. ಕನ್ನಡ ನಾಡು ನುಡಿಯೊಂದಿಗೆ ಹಂಪೆಯ ಜೊತೆಗೆ ಹೆಚ್ಚಿನ ಆಪ್ತತೆ ಬೆಳೆಸಿಕೊಂಡಿದ್ದ ಚಿ.ಮೂ ಅವರ ಸ್ವರ್ಗಸ್ಥರಾದದ್ದು ಇತ್ತೀಚೆಗೆ ಹಂಪೆ ಉತ್ಸವ 2020 ಸಮಾರೋಪ ಸಮಾರಂಭದ ದಿನದಂದು.

ಇಂಥ ಭಾವಜೀವಿ, ಸಹೃದಯಿ, ಕನ್ನಡದ ಸಂಪನ್ಮೂಲ ವ್ಯಕ್ತಿಯೊಂದಿಗೆ ನಾನು ಒಡನಾಡಿದ್ದು ಎಂದೆಂದಿಗೂ ಮರೆಯಲಾಗದ ಸವಿನೆನಪು. ■